**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಸಿಸಿ:ನಂಬರ್ 102/2015 | ಸಿಡಬ್ಲ್ಯೂ-3 | ಪಿ.ಡಬ್ಲ್ಯೂ-2 |
|---|---|---|

ಸಾಕ್ಷಿದಾರರ ಹೆಸರು : ಲಕ್ಷ್ಮಮ್ಮ
ಗಂಡನ ಹೆಸರು : ಜವರನಾಯಕ
ವಯಸ್ಸು : 60 ವರ್ಷ
ಉದ್ಯೋಗ : ಗೃಹಿಣಿ
ವಾಸ ಸ್ಥಳ : ಸಾಕ್ಷಿಬೀಡು ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.
ದಿನಾಂಕ: 08.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಂದುವರಿದ ಮುಖ್ಯವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂಧಿಕರು. ಚಾ.ಸಾ.1 ಮನು ಮತ್ತು ಚಾ.ಸಾ.2 ಮಹಾದೇವ ನನ್ನ ಮಕ್ಕಳು. ಸುಮಾರು 9 ವರ್ಷಗಳ ಹಿಂದೆ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಸಾಕ್ಷಿಬೀಡು ಗ್ರಾಮದಲ್ಲಿ ನಾನು ಮತ್ತು ನನ್ನ ಮಕ್ಕಳು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರಾದ ವಿನಾಯಕ ಮತ್ತು ನಾಗರಾಜ ಗುದ್ದಲಿ ಕಾವುಗಳು ಮತ್ತು ಗೊದಮೊಟ್ಟೆಯಿಂದ ನನ್ನ ಮಕ್ಕಳಿಗೆ ಹೊಡೆದಿರುತ್ತಾರೆ. 1ನೇ ಆರೋಪಿ ಶಿವರಾಮನಾಯಕ ಜಗಳ ಬಿಡಿಸಿರುತ್ತಾರೆ. ನನಗೆ ಅವಾಚ್ಯವಾಗಿ ಬೈದು ಆರೋಪಿತರಾದ ಪದ್ಮಮ್ಮ ಮತ್ತು ಶ್ವೇತಾರವರು ಹಲ್ಲೆ ಮಾಡಿದರು. ನಂತರ ಸಾಕ್ಷಿದಾರರಾದ ಪ್ರಕಾಶ್ ಹಾಗೂ ಶಿವೇಗೌಡರವರು ಜಗಳವನ್ನು ಬಿಡಿಸಿದರು. ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡು ನಂತರ ದೂರನ್ನು ನೀಡಲು ಪೋಲಿಸ್ ಠಾಣೆಗೆ ಹೋದೆವು. ನಾನು ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಜಮೀನಿನ ವಿಚಾರದಲ್ಲಿ ಆರೋಪಿತರು ನಮ್ಮೊಂದಿಗೆ ಜಗಳ ಮಾಡಿದರು. ಆರೋಪಿತರು ನಮಗೆ ಕೊಲೆ ಬೆದರಿಕೆಯನ್ನು ಹಾಕಿದರು. ನ್ಯಾಯಾಲಯದ ಮುಂದೆ ಇರುವ ಎರಡು ಗುದ್ದಲಿ ಕಾವುಗಳನ್ನು ಮತ್ತು ಗೊದಮೊಟ್ಟೆಯ ತುಂಡನ್ನು, ಒಂದು ಕೆಂಪು ಬಣ್ಣದ ಬನಿಯನ್ ಹಾಗೂ ಸೀಮೆಂಟ್ ಬಣ್ಣದ ಬನಿಯನ್ ಗಳನ್ನು ಕ್ರಮವಾಗಿ ಮುದ್ದೆ ಮಾಲು-1 ರಿಂದ 4 ಎಂದು ಈಗಾಗಲೇ ಗುರಿತಿಸಲಾಗಿದೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ.ಬಿ.ಎಂ ವಕೀಲರಿಂದ**

ಜಮೀನಿನಲ್ಲಿ ನಾವು ಮೆಣಸಿನಕಾಯಿಗಳನ್ನು ಬೆಳೆಯುತ್ತಿದ್ದೇವು. ನಮಗೆ ಮತ್ತು ಆರೋಪಿತರಿಗೆ ಜಮೀನು ವಿಚಾರದಲ್ಲಿ ಸುಮಾರು 40 ವರ್ಷಗಳಿಂದ ವೈಶ್ಯಮ್ಯ ಇದೆ. ಕೆಲಸ ಮಾಡುತ್ತಿದ ಜಮೀನಿನ ಸರ್ವೆ ನಂಬರ್ ನನಗೆ ಹೇಳಲು ಆಗುವುದಿಲ್ಲ. ನಾನು ಪೋಲಿಸರಿಗೆ ಜಮೀನಿನ ಸರ್ವೆ ನಂಬರ್ ಹೇಳಿರುವುದಿಲ್ಲ. ನಮ್ಮ ಜಮೀನಿನ ಪಕ್ಕದಲ್ಲಿಯೇ ಆರೋಪಿತರ ಜಮೀನು ಇದೆ. ಸಾಕ್ಷಿದಾರಾದ ಶಿವೇಗೌಡ ಮತ್ತು ಪ್ರಕಾಶರವರು ಗಲಾಟೆಯಾಗುವಾಗ ನಮ್ಮ ಜಮೀನಿನಲ್ಲಿದ್ದರು. ಸದರಿ ಸಾಕ್ಷಿದಾರರ ಜಮೀನುಗಳು ನನ್ನ ಜಮೀನಿನ ಅಕ್ಕ-ಪಕ್ಕದಲ್ಲಿ ಇರಲಿಲ್ಲ. ಆರೋಪಿತರ ಜಮೀನಿನು ನಮ್ಮ ಜಮೀನಿನ ಉತ್ತರಕ್ಕೆ ಇದೆ. ಮುದ್ದೆ ಮಾಲು 1 ಮತ್ತು 2 ಸಾಮಾನ್ಯವಾಗಿ ರೈತರ ಹೊಲ ಮತ್ತು ಮನೆಯಲ್ಲಿರುತ್ತದೆ ಎಂದರೆ ಸರಿಯಲ್ಲ.ಯಾವುದೇ ಗಲಾಟೆ ಆಗದಿದ್ದರೂ ಕೂಡಾ ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಆರೋಪಿತರು ಯಾವ ಗುದ್ದಲಿ ಕಾವನ್ನು ಹಿಡಿದುಕೊಂಡಿದರು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿತರು ನಮಗೆ ಹಲ್ಲೆ ಮಾಡಿರುವುದಿಲ್ಲ ಮತ್ತು ಅವಾಚ್ಯವಾಗಿ ಬೈದು ಪ್ರಾಣಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಪೋಲಿಸರಿಗೆ ನನ್ನ ಮಕ್ಕಳು ಮಾದ್ದೆಮಾಲುಗಳನ್ನು ನೀಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

**(ಶಮೀರ್.ಪಿ.ನಂದ್ಯಾಲ್)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.